ಆ) ಈ ಯೋಜನೆಯನ್ನು ಸರ್ಕಾರವು ಕೈ ಬಿಟ್ಟಿಲ್ಲ.

ಇ) ಪ್ರತಿ ವಾರ್ಗದರ್ಶಿಗೆ ೩ ತಿಂಗಳುಗಳ ತರಬೇತಿಯ ಸಮಯದಲ್ಲಿ ಪ್ರತಿ ತಿಂಗಳಿಗೆ ೨೦೦ ರೂಪಾಯಿಗಳಂತೆ ಸ್ಟೈಪೆಂಡನ್ನು ಹಾಗೂ ಆ ಮೇಲೆ ತಿಂಗಳಿಗೆ ೫೦ ರೂ. ಗಳಂತೆ ಅವರ ಸೇವೆಗೆ ಕೊಡಲಾಗುತ್ತಿದೆ. ಹಾಗೂ ತಿಂಗಳಿಗೆ ೫೦—೮೦ ರೂಪಾಯಿಗಳ ಔಷಧಿಯನ್ನೂ ಪೂರೈಕೆ ಮಾಡಲಾಗುತ್ತಿದೆ.

ನಿವೃತ್ತಿವೇತನ ನಿಗದಿಯಲ್ಲಿ ಸರ್ಕಾರಿ ನೌಕರರಿಗೆ ವಿಳಂಬವಾಗುತ್ತಿರುವ ಬಗ್ಗೆ

೧೭೬. ಶ್ರೀ. ಪಂಪಾಪತಿ, (ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

೧. ಸರ್ಕಾರಿ ನಿವೃತ್ತ ನೌಕರರಿಗೆ ನಿವೃತ್ತಿ ವೇತನ ನಿಗದಿ ಮಾಡುವುದರಲ್ಲಿ ಹಾಗೂ ಮಂಜೂರು ಮಾಡುವುದರಲ್ಲಿ ತಡವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

೨. ಆ) ನಿವೃತ್ತಿ ವೇತನ ನಿಗದಿಯಲ್ಲಿ ೬ ತಿಂಗಳಿಗಿಂತ ಹೆಚ್ಚಾಗಿ,

ಆ) ೬ ತಿಂಗಳಿಂದ ೯ ತಿಂಗಳು,

ಇ) ೯ ತಿಂಗಳಿಂದ ೧೦ ತಿಂಗಳು,

ಈ) ಒಂದು ವರ್ಷದಿಂದ ಮೂರು ವರ್ಷ,

ಉ) ಮೂರು ವರ್ಷಕ್ಕೆ ಮೇಲ್ಪಟ್ಟು ತಡವಾಗಿರುವ ನಿವೃತ್ತಿ ವೇತನಗಳ ಸಂಖ್ಯೆ ಎಷ್ಟು ?

೩. ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

೪. ಸಂಬಂಧಪಟ್ಟ ಇಲಾಖೆಯಲ್ಲಿ ಅದಕ್ಷತೆ ಲಂಚಗುಳಿತನ ತಾಂಡವಾಡುತ್ತಿದೆ ಎಂಬ ದೂರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೫. ಇದರಿಂದ ನಿವೃತ್ತ ನೌಕರರಿಗೆ ತೊಂದರೆಯಾಗುತ್ತಿರುವ ತೊಂದರೆ ತಪ್ಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ. ರಾಮಕೃಷ್ಣ ಹೆಗಡೆ.—(ಮಾನ್ಯ ಮುಖ್ಯ ಮಂತ್ರಿಗಳು)

೧) ನಿವೃತ್ತಿ ವೇತನವನ್ನು ಪಾವತಿ ಮಾಡಲು ಬೇಕಾಗಿದ್ದ ಮಂಜೂರಾತಿಯನ್ನು ರದ್ದು ಮಾಡಲಾಗಿದೆ. ಹಾಗಿದ್ದರೂ ನಿವೃತ್ತಿ ವೇತನವನ್ನು ನಿಗದಿ ಮಾಡುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

೨) ಮಾಹಿತಿಯನ್ನು ಪಡೆಯಲಾಗುತ್ತಿದೆ. ತದ ನಂತರಕೂಡಲೇ ಸದನದ ಮುಂದಿಡಲಾಗುವುದು.

೩) ನಿವೃತ್ತಿ ವೇತನವನ್ನು ನಿಗದಿ ಮಾಡುವುದು ಮತ್ತು ಮಂಜೂರು ಮಾಡಿ ಪಾವತಿ ಮಾಡುವುದರ ವಿಳಂಬಕ್ಕೆ ಈ ಕೆಳಕಾಣಿಸಿರುವ ಕಾರಣಗಳು.

ಅ) ಅಗತ್ಯವಾದ ದಾಖಲಾತಿಗಳು ನಿವೃತ್ತ ನೌಕರರಿಂದಾಗಲಿ ಅಥವಾ ನಿಧನ ಹೊಂದಿದ ನಿವೃತ್ತ ನೌಕರರ ಕುಟುಂಬದವರಿಂದಾಗಲಿ ದೊರಕದಿರುವುದು.

ಆ) ನಿವೃತ್ತ ನೌಕರನ ಮೇಲೆ ಇಲಾಖಾ ತನಿಖೆಯೂ ನ್ಯಾಯಾಂಗ ತನಿಖೆ ಬಾಕಿ ಇರುವುದು.

ಇ) ಸೇವೆಗಳನ್ನು ವಿಧಿ ಬದ್ಧ (ಖಾಯಂ) ಗೊಳಿಸದಿರುವಿಕೆ.

ಈ) ಸತ್ತ ಸರ್ಕಾರಿ ನೌಕರನ ವಾರಸುದಾರರ ನಡುವಿನ ವಿವಾದದಿಂದಾಗಿ.

೪) ಇಲ್ಲ.

೫) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮೆಂಡಿಕಲ್ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ

೧೭೪. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—